ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಪ್ರಯತ್ನ ಮಾಡುವುದು. ಆಮೇಲೆ ಮಂಡ್ಯ ಜಿಲ್ಲೆಯಲ್ಲಿ ತಮ್ಮ ಕ್ಷೇತ್ರ ಮಳವಳ್ಳಿ ತಾಲ್ಲೂಕು ಸೇರಿದಂತೆ ಐದು ಸಂಚಾರಿ ಪಶು ಚಿಕಿತ್ಸೆಗಳ ಹುದ್ದೆ ಖಾಲಿ ಇವೆ. ನಮಗೆ ತೊಂದರೆ ಬಂದಿದ್ದು ಹಣಕಾಸಿನದು ಆದಷ್ಟು ಬೇಗನೆ ಫೈನಾನ್ಸ್ ಇಲಾಖೆಯಿಂದ ಮಂಜೂರು ಪಡೆದು ಮಂಡ್ಯ ಜಿಲ್ಲೆಗಷ್ಟೇ ಅಲ್ಲ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಖಾಲಿ ಇರತಕ್ಕ ನಾನಾ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನಪಡುತ್ತೇನೆ.

ಯುವಕರೈತ ಸಮಾಜದ ಬಗ್ಗೆ

3597 - ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಕರ್ನಾಟಕ ಪ್ರದೇಶ ಯುವಕ ರೈತ ಸಮಾಜವು ನೊಂದಣಿಯಾಗಿದೆಯೇ?

ಆ) ಮೇಲ್ಕಂಡ ಸಂಘವನ್ನು ನಡೆಸಲು ಸರ್ಕಾರದಿಂದ ಕಟ್ಟಡವನ್ನೇನಾದರೂ ನೀಡಲಾಗಿದೆಯೇ?

ಇ) ಸದರಿ ಸಮಿತಿಯಲ್ಲಿರುವ ವ್ಯಕ್ತಿಗಳ ವಿಳಾಸಗಳನ್ನು ಒಳಗೊಂಡ ವಿವರಗಳನ್ನೊದಗಿಸುವುದು.

ಈ) ಈ ಸಮಾಜದ ಮಾಸಿಕ ಸಭೆಗಳು ಮತ್ತು ಮಹಾಸಭೆಗಳು ಸಕಾಲದಲ್ಲಿ ನಡೆಯುತ್ತಿವೆಯೇ ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಉ) ಸರ್ಕಾರದಿಂದ ಈ ಸಮಾಜಕ್ಕೆ ಗ್ರಾಂಟ್ ದೊರೆಕುತ್ತಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಆಗಿದೆ.

ಆ) ಇಲ್ಲ.

ಇ) ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು : ಅಧ್ಯಕ್ಷರು : ಮಾನ್ಯ ಕೃಷಿ ಸಚಿವರು ಕಾರ್ಯಾಧ್ಯಕ್ಷರು : ಖಾಲಿಯಿದೆ.

ಉಪಾಧ್ಯಕ್ಷರು : ಶ್ರೀ ಟಿ. ತಿಪ್ಪೇರುದ್ರಯ್ಯನವರು ಆಲೂರು ಅಂಚೆ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ.

ಗೌ :ಕಾರ್ಯದರ್ಶಿ : ಶ್ರೀ ಆರ್. ತಿಮ್ಮರೆಡ್ಡಿ, ಚಂದಾಪುರ ಅಂಚೆ, ಅನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಖಜಾಂಚಿಗಳು : ಶ್ರೀ ಸಿ.ಯಂ. ಲಿಂಗಪ್ಪನವರು ಶಾಸನ ಸಭಾ ಸದಸ್ಯರು, ಇಟ್ಟುಮಡು ಅಂಚೆ ರಾಮನಗರ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಈ) ನಡೆಯುತ್ತಿಲ್ಲ.

ಕಾರಣಗಳು :

1) ಹೊಸದಾಗಿ ಯುವಜನ ಇಲಾಖೆ ಅಸ್ತಿತ್ವಕ್ಕೆ ಬಂದು ಸಮಾಜಕ್ಕೆ ದೊರೆಯುತ್ತಿದ್ದ ಪ್ರತ್ಯೆಕ್ಷ ಹಾಗೂ ಪರೋಕ್ಷ ಪ್ರೋತ್ಸಾಹಗಳು ನಿಂತಿದ್ದು.
2) ಸದಸ್ಯತ್ವ ನೊಂದಾವಣೆಯಾಗಲೀ ಅಥವಾ ನವೀಕರಣವಾಗಲೀ ಆಗದೇ ನಿಂತುಹೋದದ್ದು.
3) ಆರ್ಥಿಕ ಮುಗ್ಗಟ್ಟು.
4) ಕಟ್ಟಡ ಇಲ್ಲದಿರುವುದು.

ಉ) ಇಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಈ ಸಂಘಕ್ಕೆ ಕೃಷಿಸಚಿವರೇ ಅಧ್ಯಕ್ಷರಾಗಿರುತ್ತಾರೆ. ಈಗಲೂ ಇವರು ಅಧ್ಯಕ್ಷರಾಗಿದ್ದಾರೆಯೇ?

ಶ್ರೀ ಎನ್. ಚಿಕ್ಕೇಗೌಡ : ಹೌದು ಸ್ವಾಮಿ.

ಶ್ರೀ ಎ.ಕೆ. ಅನಂತಕೃಷ್ಣ : ಕೃಷಿಸಚಿವರೇ ಅಧ್ಯಕ್ಷರಾಗಿ ಬಹಳ ಕಾಲದಿಂದ ಅನುಭವ ಪಡೆದಿದ್ದಾರೆ. ಈ ಸಂಸ್ಥೆಯನ್ನು ಉಳಿಸಿಕೊಳ್ಳಲಿಕ್ಕೆ ಏಕೆ ಪ್ರಯತ್ನಿಸುತ್ತಿಲ್ಲ ಅದರ ಉತ್ತರದ ಪ್ರಕಾರ ಅದು ಹೆಚ್ಚೂಕಡಿಮೆ ಸತ್ತಿದೆ. ಪುನಶ್ಚೇತನ ಕೊಡಲು ಏಕೆ ಪ್ರಯತ್ನಿಸಿಲ್ಲ?

ಶ್ರೀ ಎನ್. ಚಿಕ್ಕೇಗೌಡ : ಇದಕ್ಕೊಂದು ಹಿನ್ನೆಲೆ ಇದೆ. 52ರಲ್ಲಿ ಆಗಿನ ಕೇಂದ್ರ ಕೃಷಿಸಚಿವರಾದ ಡಾ. ಪಂಜಾಬ್‌ರಾವ್ ದೇಶಮುಖ್‌ರು ಎಲ್ಲಾ ರಾಜ್ಯಗಳಲ್ಲೂ ಈ ಯುವಕರೈತಸಂಘ ಸ್ಥಾಪನೆ ಮಾಡಿದರು. ನಾನು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿಬಂದು ಯವಕ ರೈತಸಂಘದ ಗೌರವ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದೇನೆ. ಈ ಸಂಘ ಇಂದು ಬದಲಾವಣೆಯಾಗುವ ಪರಿಸ್ಥಿತಿಗೆ ನಮ್ಮ ಯುವಜನ ಇಲಾಖೆ ಏನು ಬಂತು ಅದು ಬಂದ ಮೇಲೆ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇಲ್ಲ. ಕೇಂದ್ರ ರಾಜ್ಯ ಮಟ್ಟಗಳಲ್ಲಿ ಮಾತ್ರ ಇತ್ತು, ಜಿಲ್ಲೆಗಳಲ್ಲಿ ಇರಲಿಲ್ಲ, ಮೊದಲು ಬಿ.ಡಿ.ಓ.ರವರು ಕೊಂಚ ಅನುದಾನ ಕೊಡುತ್ತಾ ಇದ್ದರು. ಇಂದು ಅನುದಾನ ಕೊಡಲು ಇಲಾಖೆ ಬೇರೆಯಾಗಿಬಿಟ್ಟಿದೆ. ಅವರಿಗೆ ಬೇಕಾದ ಸ್ಪೋರ್ಟ್ಸ್ ಮೆಟೀರಿಯಲ್ಸ್ ಕೊಟ್ಟು ಸಹಕಾರ ಕೊಡುತ್ತಿದ್ದರು. ಆ ಹಿನ್ನೆಲೆಯಿಂದ ಇಂದು ಸದಸ್ಯತ್ವ ಕೂಡ ನೋಂದಾಯಿಸಿಲ್ಲ. ನಾನು ಮಂತ್ರಿಯಾದ ಮೇಲೆ ಮೊದಲನೇ ಸಲ ಪ್ರಸ್ತಾಪಕ್ಕೆ ಬಂತು ನಾನು ಕೃಷಿಕಸಮಾಜದಲ್ಲಿದ್ದೇನೆ ಪದವಿನಿಮಿತ್ತ. ಬಹಳಷ್ಟು ವರ್ಷಗಳಿಂದ ಸದಸ್ಯತ್ವ ನೋಂದಾಯಿಸದೇ ಇರೋದು, ಸರ್ಕಾರದಿಂದ ಉತ್ತೇಜನ ಇಲ್ಲದೇ ಇರೋದು, ಅಲ್ಲದೆ ಬೇರೆ ರೀತಿಯ ಸಂಘಸಂಸ್ಥೆಗಳು ಹಳ್ಳಿಗಳಲ್ಲಿ ಬಂದಿರುವುದರಿಂದ ಈ ಸಂಸ್ಥೆ ಅಷ್ಟು ಚೆನ್ನಾಗಿ ಕೆಲಸ ಮಾಡಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಸಂಘವನ್ನೂ ಯೂತ್ ಸರ್ವೀಸಸ್‌ಗೆ ಕೊಟ್ಟಿದ್ದೇವೆ ಎನ್ನುವ ಕಾರಣದಿಂದ ಈ ಸಂಘಕ್ಕೆ ಅವರ ಕಡೆ ಅಭಿಮಾನ ಕಡಿಮೆಯಾಗಿದೆ ಎಂದು ಅವರು ಹೇಳುವ ಮಾತಿನಲ್ಲಿಯೇ ಅರ್ಥವಾಗುತ್ತದೆ. ನಾನು ಹೇಳುವುದು ಈಗಾಗಲೇ ರೂರಲ್ ಕಮ್ಯುನಿಟಿಯನ್ನು ಬಹಳ ಮಟ್ಟಿಗೆ ನಾವು ನೆಗ್ಲೆಕ್ಟ್ ಮಾಡುತ್ತಿದ್ದೇವೆ ಎಂದು ಒಂದು ಅಪಾದನೆ ದೇಶದ್ಯಾಂತ ಇದೆ. ಯೂಥ್ ಸರ್ವೀಸಸ್ ಬಹಳ ಮಟ್ಟಿಗೆ elitist ಅಪ್ರೋಚ್‌ನಲ್ಲಿ ಕೆಲಸ ಮಾಡುತ್ತಿವೆ ಎಂದು ಹೇಳಿ ನನ್ನ ಭಾವನೆ. ಅಂದರೆ ರೂರಲ್ ಕಮ್ಯುನಿಟಿಗೆ ಕೊಡಬೇಕಾದ ಒಂದು ಆದ್ಯತೆಯನ್ನು ನೀವು ಯೂತ್ ಸರ್ವೀಸಸ್ ಮೂಲಕ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಮತ್ತು ಸಾಮಾಜಿಕವಾಗಿ ಏನಾದರೂ ಇವುಗಳನ್ನು ಬೆಳೆಸುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು : ಅದನ್ನು ಜೀರ್ಣೋದ್ಧಾರ ಮಾಡಿ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೇ, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ವಿಚಾರಣೆ ಮಾಡಿಕೊಂಡು ಇದಕ್ಕೆ ಏನಾದರೂ ಒಂದು ಅನುಕೂಲ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ಹೊಸಕೋಟೆ ಕರಗಮ್ಮ ದೇವಸ್ಥಾನದ ಜೀರ್ಣೋದ್ಧಾರ ಮಾಡಿ.

3644 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?